ಶ್ರೀ ಎಂ. ಹೆಚ್. ಜಯಪ್ರಕಾಶ್‌ನಾರಾಯಣ್.—ಅವನು ಸರ್ಕಾರೀ ನೌಕರನಾಗಿರುವುದರಿಂದ ಅಪರಾಧ ಮಾಡಿರುವುದರಿಂದ ಕೂಡಲೇ ನ್ಯಾಯಬದ್ಧವಾದ ರೀತಿಯಿಂದ ತಕ್ಷಣ ಅವನನ್ನು ಸಸ್ಪೆಂಡ್ ಮಾಡವುದು ನ್ಯಾಯವಲ್ಲವೇ? ಮತ್ತು ಆ ಹರಿಜನರಿಗೆ ಇದರಿಂದ ಏನು ನಷ್ಟವಾಗಿದೆ ಆ ನಷ್ಟವನ್ನ ಕಟ್ಟಿಕೊಡುವುದಕ್ಕೆ ಸರಕಾರದವರು ಪರ್ಯಾಲೋಚನೆ ಮಾಡುತ್ತಾರೆಯೇ?

ಶ್ರೀ ಎನ್. ಹುಚ್ಚಮಾಸಿಗೌಡ.— ಆ ನಷ್ಟವನ್ನು ಸರ್ಕಾರವೇ ಕಟ್ಟಿಕೊಡಬೇಕು ಅಂದರೆ ಅದು ಸಾಧ್ಯವಾಗುವುದಿಲ್ಲ. ಏತಕ್ಕೆಂದರೆ ಯಾರು ಅಪರಾಧಿಯಾಗಿರುತ್ತಾರೋ ಆತನ ಮೇಲೆ ಈ ನಷ್ಟವನ್ನು ಹೊರಿಸಬೇಕೇ ಏನಾ ಸರ್ಕಾರವೇ ಕಟ್ಟಿಕೊಂಡುವುದು ಯಾವ ನ್ಯಾಯವೂ ಇಲ್ಲ. ಮತ್ತು ಆದರ ಯೋಚನೆಯೂ ಇಲ್ಲ.

Primary Schools in Dharwar District.

122 SRI B.G. BANAKAR.—(Hirekerur)

Will the Minister for Education be pleased to state.—

(*a*) the total number of primary schools in Dharwar District as on 31st March 1975;

(*b*) the total number of teachers and other stff in all these schools as on 31st March 1975;

(*c*) the total amount of salary, allowances and other emoluments paid to these teachers and others for the year 1974–75 *i e.*, from 1st April 1974 to 30th March 1975?

SRI M. MALLIKARJUNA SWAMY.—(Minister for Education)

(*a*) 2,012.

(*b*) 7,947.

(*c*) Rs. 2,46,39, 63-00 including grant-in-aid to Private Primary Schools.

ಶ್ರೀ ಬಿ.ಜಿ. ಬಣಕಾರ್.—ಸ್ವಾಮಿ, ಎಷ್ಟೋ ಜನ ಶಿಕ್ಷಕರು ಪ್ರಾಥಮಿಕ ಶಾಲೆಯಲ್ಲಿ 7ನೇ ತರಗತಿ ಪರೀಕ್ಷೆಯಲ್ಲಿ ಏನು ಮಾಡುತ್ತಾರೆ ಎಂದರೆ ಆ ಪರೀಕ್ಷೆಯನ್ನು ಅವರೇ ಸೂಪರ್‌ವೈಸ್ ಮಾಡಿ ಅವರೇ ಅದನ್ನು ಕಲೆಕ್ಷನ್ ಮಾಡಿ ಅಂಕಗಳನ್ನು ಹಾಕುತ್ತಾರೆ. ಈ ರೀತಿ ಇರುವುದರಿಂದ ಈ 7ನೇ ತರಗತಿ ಪರೀಕ್ಷೆಯಲ್ಲಿ ದೋಷ ಪೂರಿತವಾದ ತಪ್ಪು ಇರುವುದರಿಂದ ಈ ಪರೀಕ್ಷೆ ಪದ್ಧತಿಯನ್ನು ಬದಲಾವಣೆ ಮಾಡುವುದು ಒಳ್ಳೆಯದಲ್ಲವೇ?

†ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಈ ಪ್ರಶ್ನೆ ಪರೀಕ್ಷಾ ಪದ್ಧತಿಗೆ ಸಂಬಂಧಪಟ್ಟ ಪ್ರಶ್ನೆ ಅಲ್ಲ.

ಶ್ರೀ ಬಿ.ಜಿ. ಬಣಕಾರ್.—ಧಾರವಾಡ ಹುಬ್ಬಳ್ಳಿ ಕಾರ್ಪೊರೇಷನ್‌ನಲ್ಲಿ ಶಿಕ್ಷಕರು ಏನು ಇದ್ದಾರೆ ಅವರನ್ನು ಗ್ರಾಮಾಂತರ ಪ್ರದೇಶಗಳಿಗೆ ವರ್ಗಾವಣೆ ಮಾಡುತ್ತಾ ಇಲ್ಲ. ಈ ಬಗ್ಗೆ ಏನಾದರೂ ಒಂದು ನಿರ್ಬಂದ ಹಾಕುತ್ತೀರಾ? ಇಲ್ಲದೇ ಹೋದರೆ ಅವರನ್ನು ವರ್ಗಾವಣೆ ಮಾಡುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಈ ಪ್ರಶ್ನೆಯಲ್ಲಿ ವರ್ಗಾವಣೆಗೆ ಸಂಬಂಧಪಟ್ಟದ್ದು ಉದ್ಭವಿಸುವುದಿಲ್ಲ.

ಶ್ರೀ ಬಿ. ಜಿ. ಬಣಕಾರ್.—ಸ್ವಾಮಿ, ಈ ಶಾಲೆಗಳಲ್ಲಿ ಕನ ಹೊಡೆಯುವವರು ಯಾರು? ವಿದ್ಯಾರ್ಥಿಗಳೋ, ಶಿಕ್ಷಕರೋ ಅಥವಾ ವಿದ್ಯಾರ್ಥಿಗಳ ಪಾಲಕರೋ? ಮತ್ತು ಈ ಶಾಲೆಗಳನ್ನು ಅಚ್ಚುಕಟ್ಟಾಗಿ ಇಡುವವರು ಯಾರು ಅನ್ನುವುದನ್ನು ಹೇಳುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಶಾಲೆಯ ಪಠ್ಯಕ್ರಮದ ಪ್ರಕಾರ ಕಾರ್ಯಾನುಭವ ಎಲ್ಲರಿಗೂ ಆಗಬೇಕು. ಮಕ್ಕಳೂ ಮಾಡಬೇಕು, ಉಪಾಧ್ಯಾಯರೂ ಕೂಡ ಮಾಡಬೇಕು. ಇದು ಸರ್ಕಾರದ ನೀತಿಯಾಗಿದೆ.

Industrial Estate at Davangere

336 SMT. NAGAMMA KESHAVAMURTHY.—(Davangere).

Will the Minister of State for Small Scale Industries be pleased to state:—

(*a*) the number of industrial estates established during the last 3 years;

(*b*) the number of sheds that have remained un-occupied and the number of small scale industries working in Davangere;

(*c*) whether there is any proposal to start an industrial estate at Davangere;

(*d*) if so, the reason for the delay in starting the same?

SRI M. VEERAPPA MOILY.—(Minister of State for Small Scale Industries)

(*a*) Nill.

(*b*) Does not arise in view of reply to clause (a).

(*c*) Yes.

(*d*) The delay is due to non-availability of funds.

Land has been acquired and construction will be taken up as soon as funds are available.

SMT. NAGAMMA KESHAVAMURTHY —I had put this question nearly two years back. As per the answer now furnished, the work was postponed since there was land acquisition trouble. Now that land has been acquired, will the Government consider my request favourably?

†SRI M. VEERAPPA MOILY.—After 1973-74 the Government had not provided any funds for construction of sheds. We have now negotiated with the Bank and during 1976-77 we are undertaking the work of construction of sheds at Davangere.

ಶ್ರೀ ಟಿ.ಎಂ. ಮಂಜುನಾಥ —ಈಗ ಬ್ಯಾಕ್‌ವರ್ಡ್ ಏರಿಯಾ ಏನು ಇದೆ ಅಂಥಾ ಕಡೆ ನ್ಯೂಳ ಇದೆ. ಅಂಥಾ ಕಡೆ ಇಂಡಸ್ಟ್ರಿಯಲ್ ಸೊಸೈಟಿ ಮಾಡುವುದಕ್ಕೆ ತೊಂದರೆ ಏನು ಇದೆ?